**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12-07-2022.**

**ಪಾಟೀ ಸವಾಲು ಪ್ರತಿವಾದಿ ನಂ.1 ರವರ ಪರ ಶ್ರೀ ಎಸ್.ಎಸ್. ವಕೀಲರಿಂದ :**

**1)** ನನ್ನ ತಂದೆಯ ಹೆಸರು ನಾರಾಯಣಪ್ಪ. ನನ್ನ ತಂದೆಗೆ ಮುನಿರಾಜ, ರಾಮನಾಥ್, ಶಿವಮೂರ್ತಿ ಮತ್ತು ರಮೇಶ್ ಎಂಬ ಮಕ್ಕಳು. ನಾನು ಹಾಜರುಪಡಿಸಿದ ನಿ.ಪಿ.1 - ವಂಶವೃಕ್ಷವನ್ನು ನಾನೇ ಹಾಕಿಸಿರುತ್ತೇನೆ. ನನ್ನ ತಂದೆಗೆ ಹೆಣ್ಣುಮಕ್ಕಳು ಇದ್ದಾರೆ. ವಂಶವೃಕ್ಷದಲ್ಲಿ ಅವರ ಹೆಸರನ್ನು ಕಾಣಿಸಿಲ್ಲ. ನಮ್ಮ ತಂದೆಗೆ 4 ಜನ ಹೆಣ್ಣುಮಕ್ಕಳು. ಅವರುಗಳೆಂದರೆ ಲಕ್ಷ್ಮಮ್ಮ, ಅಶ್ವಥಮ್ಮ, ರಾಧಮ್ಮ ಮತ್ತು ಅಮರಾವತಮ್ಮ. ವಂಶವೃಕ್ಷವನ್ನು ನಾನೇ ಹೇಳಿ ಹಾಕಿಸಿರುತ್ತೇನೆ. ಅದರಲ್ಲಿರುವ ಅಂಶ ಸತ್ಯವಾಗಿರುತ್ತದೆ.

**2)** ನಮ್ಮ ತಂದೆಯ ಹೆಸರಿನಲ್ಲಿ ಒಟ್ಟು 1 ಸರ್ವೆ ನಂಬರ್ ಆಸ್ತಿ ಇತ್ತು. ನಮ್ಮ ದೊಡ್ಡಪ್ಪನವರ ಹೆಸರಿನಲ್ಲಿ 1 ಆಸ್ತಿ, ನನ್ನ ಅಣ್ಣ ರಾಮನಾಥನ ಹೆಸರಿನಲ್ಲಿ ಇತ್ತು, ಇನ್ನೊಂದು ಆಸ್ತಿ ಅಮರಾವತಮ್ಮ ಹೆಸರಿನಲ್ಲಿ ಇತ್ತು. ಅವುಗಳ ಸರ್ವೆ ನಂ.19 – 1 ಎಕರೆ 23 ಗುಂಟೆ, ಸರ್ವೆ ನಂ.42/5 – 2 ಎಕರೆ 1 ಗುಂಟೆ, ಇನ್ನೊಂದು ಆಸ್ತಿಯ ಸರ್ವೆ ನಂಬರ್ ಸರಿಯಾಗಿ ಗೊತ್ತಿಲ್ಲ ಅದರ ವಿಸ್ತೀರ್ಣ 1 ಎಕರೆ 20 ಗುಂಟೆ, ಇನ್ನೊಂದು ಆಸ್ತಿಯ ವಿಸ್ತೀರ್ಣ 16 ಗುಂಟೆ. ಮನೆ ಜಾಗ, ಹಿತ್ತಲು ಜಾಗದ ಖಾನೇಷುಮಾರಿ ನಂಬರ್ ನನಗೆ ಗೊತ್ತಿಲ್ಲ.

**3)** ಈ ಹಂತದಲ್ಲಿ ವಾದಿಯ ಪರ ವಕೀಲರು ವಾದಿ ಹಾಜರುಪಡಿಸಿದ ನೋಂದಾವಣಿ ಅಲ್ಲದ ಪಂಚಾಯತ್ ಪರಿಕತ್ ದಾಖಲೆಯನ್ನು ನಿಗಧಿತ ಮುದ್ರಾಂಕ ಶುಲ್ಕಕ್ಕಾಗಿ ಜಿಲ್ಲಾನೋಂದಾಣಾಧಿಕಾರಿಗಳ ಕಛೇರಿಗೆ ಕಳುಹಿಸಿದ ದಾಖಲೆ ವಾಪಸ್ಸು ಬಂದಿರುವುದಿಲ್ಲ. ಅದನ್ನು ವಾಪಸ್ಸು ತರಿಸಿಕೊಳ್ಳಲು ಪ್ರಾರ್ಥಿಸಿಕೊಂಡಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**